"ಮಧುರ ಮಕ್ಕಳೇ - ಅರ್ಧ ಕಲ್ಪದಿಂದ ಪಂಚ ವಿಕಾರಗಳ ರೋಗದಿಂದ ಬಳಲುತ್ತಿದ್ದೀರಿ, ಈಗ ಅವುಗಳು ಬಿಟ್ಟು ಹೋಗುತ್ತವೆ, ಆದುದರಿಂದ ಅಪಾರವಾದ ಖುಷಿಯಲ್ಲಿರಬೇಕು"

ಪ್ರಶ್ನೆ: ನೀವು ಮಕ್ಕಳು ಈಗ ಯಾವ ಒಂದು ಅಭ್ಯಾಸ(ಹಾಬಿ)ವನ್ನು ಇಟ್ಟುಕೊಳ್ಳಬೇಕು? ಯಾವ ಮಾತುಗಳೊಂದಿಗೆ ನಿಮ್ಮ ಸಂಬಂಧವಿಲ್ಲ?

ಉತ್ತರ: ಒಬ್ಬ ತಂದೆಯಿಂದ ಪೂರ್ಣ ಆಸ್ತಿ ತೆಗೆದುಕೊಳ್ಳುವ ಅಭ್ಯಾಸ ಇಟ್ಟುಕೊಳ್ಳಬೇಕು. ಮನುಷ್ಯರಿಗಂತೂ ಅನೇಕ ಪ್ರಕಾರದ ಅಭ್ಯಾಸಗಳು ಇರುತ್ತವೆ. ನೀವು ಅದೆಲ್ಲವನ್ನು ಬಿಟ್ಟು ಬಿಡಬೇಕು. ನೀವೀಗ ಈಶ್ವರನ ಮಕ್ಕಳಾಗಿದ್ದೀರಿ, ತಂದೆಯ ಜೊತೆ ಮನೆಗೆ ಹಿಂತಿರುಗಬೇಕಾಗಿದೆ. ಆದುದರಿಂದ ಈ ಶರೀರದ ಜೊತೆ ಸಂಬಂಧವಿರುವ ಎಲ್ಲಾ ಮಾತುಗಳನ್ನು ಮರೆತು ಬಿಡಬೇಕು. ಹೊಟ್ಟೆಗೆ ಎರಡು ರೊಟ್ಟಿ ಕೊಡುತ್ತಾ ಬುದ್ಧಿಯನ್ನು ಹೊಸ ಜಗತ್ತುನೊಂದಿಗೆ ಜೋಡಿಸಬೇಕು.

ಗೀತೆ: ಯಾರ ಜೊತೆಗಾರ ಭಗವಂತ ಆಗಿದ್ದಾರೆ ಅವರಿಗೆ ಮಾಯೆಯ ಬಿರುಗಾಳಿ ಏನು ಮಾಡಲಾಗದು....

ಓಂ ಶಾಂತಿ. ಯಾರು ಅನನ್ಯ ಮಹಾವೀರ ಅಢೋಲ ಮಕ್ಕಳಿದ್ದಾರೆ ಅವರಿಗೆ ಮನಸ್ಸಿನಲ್ಲಿ ಅನೇಕ ಪ್ರಕಾರದ ಬಿರುಗಾಳಿ ಬರುತ್ತವೆ ಹಾಗು ಪ್ರಾಕೃತಿಕ ಆಪತ್ತುಗಳು ರೋಗ ಮುಂತಾದವುಗಳೂ ಸಹ ಬರುತ್ತವೆ. ಏಕೆಂದರೆ ಅಂತಿಮದ ಮಾಯೆಯ ಆಡಂಬರವಾಗಿದೆ. ಮಾಯೆಯು ಬಹಳಷ್ಟು ಅಲೆಗಾಡಿಸುತ್ತದೆ. ಯಾರು ಪಕ್ಕಾ ನಿಶ್ಚಯ ಬುದ್ಧಿ ಮಕ್ಕಳಿದ್ದಾರೆ ಅವರು ಶರೀರದ ಲೆಕ್ಕಾಚಾರ ಮುಗಿಯುತ್ತಿದೆ ಎಂದು ತಿಳಿದುಕೊಳ್ಳುತ್ತಾರೆ. ಯಾವುದೇ ರೋಗದಿಂದ ಸಂಪೂರ್ಣ ಗುಣವಾಗುತ್ತೇವೆಂದರೆ ಖುಷಿಯಾಗುತ್ತದೆ. ನಾವು ಈಗ ಈ ವಿಕಾರಗಳ ರೋಗದಿಂದ ಗುಣಮುಕರಾಗುತ್ತಿದ್ದೇವೆ. ಕೆಲವು ದಿನಗಳಷ್ಟೆ ಉಳಿದಿದೆ. ಈ ಪಂಚ ವಿಕಾರಗಳೆಂಬ ರೋಗ ಅರ್ಧಕಲ್ಪದಿಂದ ಹಿಡಿದಿತ್ತು. ಇದರಿಂದ ಮನುಷ್ಯರು ಅಜಾಮಿಳನಂತಹ ಪಾಪಾತ್ಮರಾಗಿ ಬಿಟ್ಟಿದ್ದಾರೆ. ಇಂತಹ ಜಗತ್ತಿನ ದಿನಗಳು ಸ್ವಲ್ಪವೇ ಉಳಿದಿವೆ. ಈ ಎಲ್ಲಾ ರೋಗಗಳಿಂದ ನಾವು ಸದಾಕಾಲಕ್ಕೆ ಬಿಡುಗಡೆ ಆಗುತ್ತಿದ್ದೇವೆ. ಈ ಮಾತುಗಳನ್ನು ಪ್ರಪಂಚದವರು ತಿಳಿದುಕೊಂಡಿಲ್ಲ. ಅವರು ಅಸುರಿ ಬುದ್ಧಿಯವರಾಗಿದ್ದಾರೆ. ಅವರಂತೂ ಅಯ್ಯೋ ಎಂದು ನರಳುತ್ತಿರುತ್ತಾರೆ. ನೀವೂ ಸಹ ಇಂತಹ ಘಟನೆಗಳನ್ನು ನೋಡಿತ್ತಿರುತ್ತೀರಿ. ನಿಮಗೆ ಈ ಮಾತುಗಳಿಂದ ಯಾವುದೇ ಸಂಬಂಧವಿಲ್ಲ. ಇವು ಹೊಸ ಮಾತುಗಳೇನು ಅಲ್ಲ. ಇವು ನಡೆಯಲೇಬೇಕಾಗಿದೆ. ಆದುದರಿಂದ ಭಯಪಡುವಂತಹ ಯಾವುದೇ ಮಾತಿಲ್ಲ. ಬಾಕಿ ಸ್ವಲ್ಪವೇ ಸಮಯ ಉಳಿದಿದೆ, ಹೊಟ್ಟೆಗೆ ಕೇವಲ ಎರಡು ರೊಟ್ಟಿ ಇದ್ದರೆ ಸಾಕು. ತಂದೆಯಿಂದ ಆಸ್ತಿಯನ್ನು ಪಡೆಯುವ ಅಭ್ಯಾಸವನ್ನು ನಾವು ಈಗ ಇಟ್ಟುಕೊಳ್ಳಬೇಕು. ಮನುಷ್ಯರಲ್ಲಿ ಅನೇಕ ಪ್ರಕಾರದ ಅಭ್ಯಾಸಗಳಿರುತವೆ. ಆದರೆ ನಿಮಗೆ ಯಾವುದು ಮನುಷ್ಯರಂತೆ ಅಭ್ಯಾಸಗಳು ಇಲ್ಲ. ಶರೀರಕ್ಕೆ ಸಂಬಂಧ ಪಟ್ಟ ಮಾತುಗಳನ್ನು ಮರೆಯಬೇಕಾಗಿದೆ. ನಾವು ಈಗ ಈಶ್ವರನಿಗೆ ಆಗಿದ್ದೇವೆ. ಈಗ ನಾವು ತಂದೆಯ ಹತ್ತಿರ ಅಥವಾ ಪ್ರಿಯತಮನ ಬಳಿಗೆ ಹೋಗಬೇಕು. ಈ ಪ್ರಿಯತಮ ಅತಿ ವಿಚಿತ್ರವಾಗಿದ್ದಾರೆ. ವಿಚಿತ್ರವಾಗಿರುವ ಕಾರಣ ಪೂರ್ತಿ ನೆನಪು ಮಡುವುದಿಲ್ಲ. ಇದು ಹೊಸ ಪದ್ದತಿಯಲ್ಲವೆ. ಆತ್ಮವು ಪರಮಾತ್ಮನನ್ನು ನೆನಪು ಮಾಡಬೇಕು. ಅರ್ಧ ಕಲ್ಪದಿಂದ ಎಂದೂ ಸಹ ಈ ರೀತಿ ನೆನಪು ಮಾಡಿಲ್ಲ, ಸತ್ಯಯುಗದಲ್ಲಿ ಕೇವಲ ನಾನು ಆತ್ಮನೆಂಬ ಅರಿವಿತ್ತು. ಬೇರೆ ಯಾವ ಜ್ಞಾನವು ಇರುವುದಿಲ್ಲ. ನಾನು ಆತ್ಮ ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ಪಡೆಯುತ್ತೇನೆ. ಇಲ್ಲಿ ಆತ್ಮನನ್ನೇ ಪರಮಾತ್ಮ ಮಾಡಿ ಬಿಟ್ಟಿದ್ದಾರೆ. ಪರಮಾತ್ಮ ಸರ್ವವ್ಯಾಪಿ ಎಂದು ಹೇಳಿ ಬಿಟ್ಟಿದ್ದಾರೆ. ಈಗ ಈ ಹಳೆಯ ಪ್ರಪಂಚ ನಿಮಗೆ ಇದ್ದರೂ ಇಲ್ಲದಂತೆ. ನಿಮ್ಮ ಬುದ್ಧಿಯ ಸಂಬಂಧ ಹೊಸ ಪ್ರಪಂಚದೊಂದಿಗೆ ಇದೆ. ಹೊಸ ಮನೆಯನ್ನು ಮಾಡಿದಾಗ ಬುದ್ಧಿ ಹಳೆಯ ಮನೆಯಿಂದ ಹೊಸ ಮನೆಯನ್ನು ನೆನಪು ಮಾಡುತ್ತದೆ. ಈಗ ಇಷ್ಟೆಲ್ಲಾ ಧರ್ಮದವರು ಸಮ್ಮೇಳನ ಮುಂತಾದವುಗಳನ್ನು ಮಾಡುತ್ತಾರೆ ಆದರೆ ಒಬ್ಬರ ಬುದ್ಧಿಯ ಸಂಬಂಧವು ಪರಮಪಿತ ಪರಮಾತ್ಮನೊಂದಿಗೆಯಿಲ್ಲ. ಈಗ ನಿಮಗೆ ಕಲಿಸುವಂತಹ ತಂದೆ ಸಿಕ್ಕಿದ್ದಾರೆ. ಅವರೇ ಜ್ಞಾನೇಶ್ವರ ಹಾಗು ಯೋಗೇಶ್ವರ ಆಗಿದ್ದಾರೆ. ಈಶ್ವರ ಎಂದರೆ ತಮ್ಮೊಂದಿಗೆ ಸಂಬಂಧ ಜೋಡಿಸುವುದನ್ನು ಕಲಿಸಿಕೊಡುತ್ತಾರೆ, ಜ್ಞಾನೇಶ್ವರ ಅರ್ಥಾತ್ ಈಶ್ವರಿನಲ್ಲಿಯೇ ಜ್ಞಾನ ಇದೆಯೆಂದು ಅರ್ಥ. ಅವರೇ ಜ್ಞಾನ ಹಾಗೂ ಯೋಗವನ್ನು ಕಲಿಸಿಕೊಡಬಲ್ಲರು. ಯಾರಿಗೆ ಈ ಪಕ್ಕಾನಿಶ್ಚಯವಿದೆ-ಅವರು ಈ ಪ್ರಪಂಚದಲ್ಲಿ ನಾವು ಸ್ವಲ್ಪ ಸಮಯ ಇರುವುದೆಂದು ತಿಳಿದಿರುತ್ತಾರೆ. ನಾವೀಗ ಮನೆಗೆ ಹಿಂತಿರುಗಬೇಕು. ಹೇಗೆ ನಾಟಕದ ಪಾತ್ರಧಾರಿಗಳಿಗೆ ಇನ್ನು ಸ್ವಲ್ಪ ಸಮಯ ನಾಟಕ ಮಾಡಿ ನಮ್ಮ ಮನೆಗೆ ನಾವು ಹೋಗಿತ್ತೇವೆ ಎಂದು ಗಡಿಯಾರವನ್ನು ನೋಡುತ್ತಿರುತ್ತಾರೆ. ನಿಮ್ಮದು ಬೇಹದ್ದಿನ ಗಡಿಯಾರವಾಗಿದೆ. ಇದು ಅಂತಿಮ ಜನ್ಮವೆಂದು ನಿಮಗೆ ತಿಳಿದಿದೆ. ನಾವು ಈ ಹಳೆಯ ಶರೀರವನ್ನು ಬಿಟ್ಟು ವಿಶ್ವದ ರಾಜಕುಮಾರ-ರಾಜಕುಮಾರಿಯಾಗುತ್ತೇವೆ. ಅಂದಮೇಲೆ ನಿಮಗೆ ಬಹಳ ಖುಷಿ ಆಗಬೇಕು. ನಮ್ಮ ಮಮ್ಮಾ ಬಾಬಾರವರು ಸಹ ರಾಜಕುಮಾರ ರಾಜಕುಮಾರಿ ಆಗುತ್ತಾರೆ. ಮಕ್ಕಳೀಗ ಚೆನ್ನಾಗಿ ಓದುತ್ತಾ ವಿಜಯ ಮಾಲೆಯಲ್ಲಿ ಸಮೀಪ ಸ್ಥಾನವನ್ನು ಪಡೆಯಬೇಕು. ತಂದೆಯ ಹತ್ತಿರ ಯಾರಾದರು ಕೇಳಿದರೆ ತಂದೆಯು

ತಿಳಿಸುತ್ತಾರೆ ನಿಮ್ಮ ಚಲನೆ ಹೀಗಿದೆ, ವಿಜಯ ಮಾಲೆಯ ಸಮೀಪ ಬರುತ್ತೀರೋ ಇಲ್ಲವೋ, ಚಲನೆಯಿಂದಲೇ ಎಲ್ಲವು ತಿಳಿಯುತ್ತದೆ, ಸ್ವಯಂಗೂ ಸಹ ತಿಳಿದು ಬಿಡುತ್ತದೆ - ನಾವು ಎಲ್ಲಿಯವರೆಗೆ ಉತ್ತೀರ್ಣರಾಗುತ್ತೇವೆ? ಕೆಲವರು ನಾವು ಎಂದಿಗೂ ಉತ್ತೀರ್ಣರಾಗುವುದೇ ಇಲ್ಲ ಎಂದು ತಿಳಿಯುತ್ತಾರೆ, ತಂದೆಗೆ ಮಗು ಆಗಿದ್ದೇನೆ, ಎಲ್ಲವನ್ನು ಸಮರ್ಪಣ ಮಾಡಿದ್ದೇನೆ, ತಂದೆಯ ಮಡಿಲಿನಲ್ಲಿ ಕುಳಿತಿದ್ದೇನೆ ಆದರೆ ಧಾರಣೆ ಇಲ್ಲವೆಂದಾಗ ಶ್ರೇಷ್ಠ ಪದವಿ ಪಡೆಯಲು ಸಾಧ್ಯವಿಲ್ಲ. ಗೃಹಸ್ಥ ವ್ಯವಹಾರದಲ್ಲಿದ್ದು ಸೇವೆ ಮಾಡುವಂತಹವರು ಇಲ್ಲಿರುವವರಿಗಿಂತಲೂ ಉತ್ತಮ ಪದವಿಯನ್ನು ಪಡೆಯಬಹುದು. ಇವರು ತುಂಬಾ ತೀವ್ರವಾಗಿ ಪುರುಷಾರ್ಥ ಮಾಡುತ್ತಿದ್ದಾರೆಂದು ಗೊತ್ತಾಗುತ್ತದೆ. ಕೇವಲ ಅಂತಹವರ ಜೊತೆಯಲ್ಲಿದ್ದರೂ ಲಾಭವಾಗುತ್ತದೆ. ಮೋಡಗಳು ಸಾಗರದ ಸಮೀಪ ಬಂದು ತುಂಬಿಕೊಂಡು ಸುರಿಸಲು ಹೊರಟು ಹೋಗುತ್ತಾರೆ.

ಮುರಳಿಯಂತೂ ಎಲ್ಲಾ ಕಡೆ ಹೋಗಿತ್ತಿರುತ್ತದೆ. ಮುರಳಿಯನ್ನು ಕೇಳಿ ಅನೇಕರಿಗೆ ತಿಳಿಸುತ್ತಿರುತ್ತಾರೆ. ತುಂಬಾ ಸೇವೆ ಮಾಡುತ್ತಾ ಶ್ರೇಷ್ಠ ಪದವಿಯನ್ನು ಪಡೆಯಲು ಶ್ರಮ ಪಡಬೇಕಾಗುತ್ತದೆ. ಇಲ್ಲಿ ಶ್ರಮ ಪಡದವರು ಉರಳಿ ಬೀಳುತ್ತಾರೆ. ಪುರುಷಾರ್ಥದ ಮೇಲೆ ಆಧಾರವಾಗಿದೆ. ತಮ್ಮ ನಾಡಿಯನ್ನು ತಾವೇ ನೋಡಿಕೊಳ್ಳಬಹುದು ನಾವು ಪುರುಷಾರ್ಥದಿಂದ ಎಂತಹ ಪದವಿಯನ್ನು ಪಡೆಯುತ್ತೇನೆಂದು ತಿಳಿದುಕೊಳ್ಳಬಹುದು ಈಗ ಪುರುಷಾರ್ಥ ಮಾಡಿ ಶ್ರೇಷ್ಠ ಪದವಿಯನ್ನು ಪಡೆಯಲಿಲ್ಲವೆಂದರೆ ಕಲ್ಪ-ಕಲ್ಪಾಂತರ ಅದೇ ಪದವಿ ಸಿಗುವುದು. ಇದು ಬೇಹದ್ದಿನ ನಾಟಕವಾಗಿದೆ. ಈಗ ತಮ್ಮ ಬುದ್ಧಿ ವಿಶಾಲವಾಗಿದೆ. ನಾಟಕದ ಆದಿ-ಮಧ್ಯ-ಅಂತ್ಯವನ್ನು ತಿಳಿದುಕೊಳ್ಳುವುದು ಬಹಳ ಮಜಾ ಅನುಸುತ್ತದೆ. ಆದರೆ ಮಾಯೆಯ ಬಿರುಗಾಳಿ ಒಂದಲ್ಲ ಒಂದು ತಪ್ಪನ್ನು ಮಾಡಿಸಿ ಬಿಡುತ್ತದೆ. ಒಳ್ಳೊಳ್ಳೆಯ ಮಕ್ಕಳ ಮೇಲೆ ಮಾಯೆ ವಿಜಯಿ ಆಗಿ ಬಿಡುತ್ತದೆ. ಮುಂದೇ ಬರುತ್ತಾ ತುಂಬಾ ವೃದ್ಧಿ ಆಗುತ್ತದೆ. ನಿಮ್ಮ ಹೆಸರು ಪ್ರಖ್ಯಾತವಾಗುತ್ತದೆ. ಈಗ ದೆಹಲಿಯಲ್ಲಿ ಧಾರ್ಮಿಕ ಸಮ್ಮೇಳನ ಆಗುತ್ತದೆ. ಸಮ್ಮೇಳನದಲ್ಲಿ ತಿಳಿಸಲು ತುಂಬಾ ಉತ್ತಮ ಬುದ್ಧಿಯು ಬೇಕಾಗುತ್ತದೆ. ಒಳ್ಳೆಯ ವಿದ್ಯಾವಂತರು ಹೋಗಬೇಕಾಗುತ್ತದೆ. ಮುಖಂಡರ ಚಿಕ್ಕ ಕಮಿಟಿ ಇರುತ್ತದೆ. ನಂತರ ದೊಡ್ಡ ಸಮ್ಮೇಳನವನ್ನು ಮಾಡುತ್ತಾರೆ. ಪೋಪ್ ಮುಂತಾದವರಿಗೆ ಮೊದಲೇ ಎಲ್ಲಾ ವ್ಯವಸ್ಥೆ ಮಾಡಲಾಗುತ್ತದೆ. ಇವರೂ ಸಹ ಸಮ್ಮೇಳನದಲ್ಲಿ ಉತ್ತಮ ವಿಚಾರವನ್ನು ಮಾಡಿಸುತ್ತಾರೆ. ಇಂತಹ ಸಮ್ಮೇಳನಕ್ಕೆ ಒಳ್ಳೆಯ ಬುದ್ಧಿವಂತ ಮಕ್ಕಳು ಬೇಕಾಗುತ್ತದೆ, ಯಾರು ತುಂಬಾ ಬುದ್ಧಿವಂತರಿತ್ತಾರೆ ಅಂತಹವರು ಹೋಗಿ ತಿಳಿಸಿಕೊಡಬೇಕಾಗುತ್ತದೆ. ಮೊದಲಿಗೆ ಎಲ್ಲಾ ಧರ್ಮದವರಿಗೆ ಮುಖಂಡರು ಯಾರೆಂಬುದನ್ನು ತಿಳಿಸಬೇಕಾಗುತ್ತದೆ. ಈಗ ತಂದೆಯು ಬಂದಿದ್ದಾರೆ-ತಂದೆಯ ಆಗಮನದ ಮೊದಲು ದೇವೀ-ದೇವತಾ ಧರ್ಮವನ್ನು ಕುರಿತು ಯಾರಿಗೂ ಗೊತ್ತಿರಲಿಲ್ಲ. ಈಗ ದೇವೀ-ದೇವತಾ ಧರ್ಮದಲ್ಲೂ ಮುಖಂಡರಿದ್ದಾರೆಂದು ಖುಷಿಯಾಗುತ್ತದೆ. ಯಾರು ಜ್ಞಾನದಲ್ಲಿ ಪರಿಪಕ್ವ ವಾಗಿರುವಂತಹವರು ಅನ್ಯರನ್ನು ಈ ರೀತಿ ಕೇಳಬಹುದು - ಸರ್ವ ಧರ್ಮಗಳಲ್ಲಿ ಶ್ರೇಷ್ಠ ಧರ್ಮ ಯಾವುದು? ಅವರನ್ನೇ ಸಮ್ಮೇಳನದಲ್ಲಿ ಮುಖಂಡರನ್ನಾಗಿ ಮಾಡಬೇಕಾಗುತ್ತದೆ. ನೀವು ಬ್ರಹ್ಮಾಕುಮಾರಿ-ಕುಮಾರಿಯರು ಎಲ್ಲರಿಗಿಂತಲೂ ಶ್ರೇಷ್ಠ (ಹೆಡ್), ನೀವು ಜಗನ್ಮಾತೆಯರಾಗಿದ್ದೀರಿ. ಮಾತೆಯರಿಗೆ ತುಂಬಾ ಗೌರವಿದೆ. ಕುಮಾರಿಯರು ಭೀಷ್ಮಪಿತ ಮುಂತಾದವರಿಗೆ ಬಾಣ ಹೊಡೆದರೆಂದು ತೋರಿಸುತ್ತಾರೆ. ಈ ಕುಮಾರಿಯರ ಮುಂದೆ ಎಲ್ಲರು ಬರಬೇಕಾಗುತ್ತದೆ. ಶ್ರೇಷ್ಠಾತಿ ಶ್ರೇಷ್ಠ ಯಾರೆಂದು ತಿಳಿಸಿಕೊಡಬೇಕಾಗುತ್ತದೆ. ಆಗ ಸರ್ವವ್ಯಾಪಿಯ ಜ್ಞಾನ ಸುಳ್ಳು ಎಂದು ಅರಿತುಕೊಳ್ಳುತ್ತಾರೆ.

ನೀವೀಗ ಯುದ್ಧದ ಮೈದಾನದಲ್ಲಿದೀರಿ. ತಂದೆ ಪರಿಚಯವನ್ನು ಕೊಡುವುದು ನಿಮಗೆ ಹೊಸ ಮಾತೇನಲ್ಲ. ಒಳ್ಳೊಳ್ಳೆಯ ಮಕ್ಕಳಿಗೆ ಈ ನಶೆ ಇರುತ್ತದೆ. ನಾವು ಈ ಪಾತ್ರವನ್ನು ಅನೇಕ ಬಾರಿ ಮಾಡಿದ್ದೇವೆ. ಈಗ ಈ ಹಳೆಯ ಪ್ರಪಂಚ ವಿನಾಶವಾಗುತ್ತದೆ. ಈ ಹಳೆಯ ವಸ್ತ್ರವನ್ನು ಕಳಚಿ ಪುನಃ ಹೊಸದಾಗಿ ಪಾತ್ರ ಮಾಡಬೇಕಾಗುತ್ತದೆ. ಈಗ ನಿಮ್ಮ ಬುದ್ಧಿ ವಿಶಾಲವಾಗಿದೆ. ಈಗ ಈ ಹಳೆಯ ವಸ್ತ್ರವನ್ನು ಕಳಚಿ 84 ಜನ್ಮ ಹೊಸ-ಹೊಸ ಶರೀರವನ್ನು ತೆಗೆದುಕೊಳ್ಳುತ್ತೀರಿ. ಬುದ್ಧಿಯಲ್ಲಿ ಸದಾ ಇದು ತಿಳಿದಿರಬೇಕು ಪ್ರತಿಯೊಬ್ಬ ಪಾತ್ರಧಾರಿಗೆ ತಮ್ಮ ತಮ್ಮ ಪಾತ್ರದಬಗ್ಗೆ ತಿಳಿದಿರಬೇಕು. 84 ಜನ್ಮ ಪಡೆದು ಪಾತ್ರ ಮಾಡಿದ್ದೇವೆ. ಈಗ ಆಟ ಪೂರ್ತಿಯಾಗುತ್ತಿದೆ. ಈ ವಸ್ತ್ರವೂ ಸಹ ಪೂರ್ತಿ ಆಗುತ್ತಿದೆ. ಸೃಷ್ಟಿಯು ತಮೋಪ್ರಧಾನವಾಗಿದೆ. ಪುನಃ ನಮ್ಮ ರಾಜಧಾನಿ ಸ್ಥಾಪನೆಯಾಗಿ ವಿನಾಶ ಪ್ರಾರಂಭವಾಗುತ್ತದೆ. ನಾವು ಹೋಗಿ ಮುಂದಿನ ಜನ್ಮದಲ್ಲಿ ವಿಶ್ವದ ಮಾಲಿಕರಾಗುತ್ತೇವೆ. ಇಲ್ಲಿ ಓದುವ ವಿದ್ಯೆಗೆ ಈ ಜನ್ಮದಲ್ಲಿಯೇ ಸಿಗುತ್ತದೆ. ನಿಮಗೆ ಈಗ ನೆನಪು ಬಂದಿದೆ ನಾವು ಹೋಗಿ ದೈವೀ ಜನ್ಮವನ್ನು ಪಡೆಯುತ್ತೇವೆ ನಂತರ ಕ್ಷತ್ರಿಯ ಜನ್ಮವನ್ನು ಪಡೆಯುತ್ತೇವೆ. ಇದು ಬುದ್ಧಿಯಲ್ಲಿ ನೆನಪಿದ್ದಾಗ ಅಪಾರವಾದ ಖುಷಿಯಿರುತ್ತದೆ. ಉತ್ತಮ ಪುರುಷಾರ್ಥಿ ಮಕ್ಕಳ ಬುದ್ಧಿಯಲ್ಲಿ ಇಂತಹ ಮಾತುಗಳ ಚಿಂತನೆ ನಡೆಯುತಿರುತ್ತದೆ.

ಬಾಬಾ ತಿಳಿಸಿದ್ದಾರೆ - ಕರ್ಮವಂತು ಮಾಡಲೇಬೇಕು ಹಾಗೂ ತಮ್ಮ ನೆನಪಿನ ಚಾರ್ಟನ್ನು ಹೆಚ್ಚಿಸಕೊಳ್ಳಬೇಕು. ರಾತ್ರಿಯ ಸಮಯವು ಯೋಗ್ಯವಾಗಿದೆ. ನೆನಪಿನಲ್ಲಿ ಯಾವುದೇ ರೀತಿ ಆಯಾಸವಾಗುವುದಿಲ್ಲ. ಎಲ್ಲಾ ಸಮಯ ಏಕರಸ ಸ್ಥಿತಿಯಲ್ಲಿ ಇರದ ಕಾರಣ ಬಿರುಗಾಳಿ ಬಂದು ಆಯಾಸ ಪಡಿಸುತ್ತದೆ. ಇಷ್ಟವಿಲ್ಲದಿದ್ದರು ಬಿರುಗಾಳಿ ಬಂದು ಬಿಡುತ್ತದೆ, ಹಾಗೂ ಪೀಡಿಸುತ್ತದೆ. ಉಳಿದಂತೆ ತಂದೆಯ ನೆನಪಲ್ಲಿದ್ದು ಜ್ಞಾನದ ಚಿಂತೆಯಲ್ಲಿ ಮುಳಿಗಿದ್ದಾಗ ಬುದ್ಧಿ ಇನ್ನೂ ಭರ್ಪೂರ್ ಆಗಿ ಬಿಡುತ್ತದೆ. ಇದು ತಂದೆಯ ಅನುಭವ ಆಗಿದೆ. ತುಂಬಾ ಬಿರುಗಾಳಿ ಬರುತ್ತದೆ. ಎಷ್ಟು ಶಕ್ತಿಶಾಲಿ (ರುಸ್ತುಮ್) ಆಗುತ್ತೀರಿ ಅಷ್ಟು ಮಾಯೆ ಹೆಚ್ಚಾಗಿ ಪೀಡಿಸುತ್ತದೆ.

ಇದು ಒಂದು ನಿಯಮ ಆಗಿದೆ. ತಂದೆ ತಿಳಿಸುತ್ತಾರೆ ಮಾಯೆ ತುಂಬಾ ಬಲವಂತ ಆಗಿದೆ. ಏಕೆಂದರೆ ಮಾಯೆಯ ರಾಜ್ಯ ಈಗ ಮುಗಿದು ಹೋಗುವ ಕಾರಣ ತುಂಬಾ ಬಿರುಗಾಳಿ ತಂದು ಹಾಕುತ್ತದೆ. ಮಾಯೆಗೆ ಭಯ ಪಡಬಾರದು. ಈ ಶರೀರಕ್ಕೆ ಏನೇ ಆದರು ಸಹ ಕರ್ಮ ಭೋಗವಾಗಿದೆ. ಆಗ ದುಃಖಿಗಳಾಗಬಾರದು. ಇದು ಕೊನೆಯ ಶರೀರವಾಗಿದೆ. ಬಾಕಿ ಸ್ವಲ್ಪವೇ ಸಮಯವಿದೆ, ಈ ರೀತಿ ಜ್ಞಾನದ ಚಿಂತನೆಯಲ್ಲಿ ಸದಾ ಖುಷಿಯಾಗಿರಬೇಕು. ನೀವು ಪರಮಪಿತ ಪರಮಾತ್ಮನ ಮಡಿಲನ್ನು ಪಡೆದಿರುವ ಕಾರಣ ನಾಟಕದಲ್ಲಿ ನಿಮ್ಮ ಪದವಿ ತುಂಬಾ ಶ್ರೇಷ್ಠವಾಗಿದೆ. ನಿಮ್ಮಲ್ಲಿ ಯಾರು ಉತ್ತಮ ಪುರುಷಾರ್ಥಿಗಳಿದ್ದಾರೆ, ಅವರಂತಹ ಸೌಭಾಗ್ಯಶಾಲಿ ಬೇರೆ ಯಾರು ಇರುವುದಿಲ್ಲ. ಈ ಈಶ್ವರೀಯ ಸುಖ ಶ್ರೇಷ್ಠವಾಗಿದೆ. ಭಾರತ ಸ್ವರ್ಗ, ಅವಿನಾಶಿ ಖಂಡ ಹಾಗು ಭಾರತದಲ್ಲಿ ಯಾವ ಧರ್ಮವು ಇರಲಿಲ್ಲವೆಂದು ನೀವು ತಿಳಿಸಿಕೊಡಬಹುದು. ಉಳಿದ ಧರ್ಮಗಳು ನಂತರ ಬರುತ್ತವೆ. ಸೂರ್ಯವಂಶೀ ರಾಜಧಾನಿ ಕಳೆದ ಮೇಲೆ ಚಂದ್ರವಂಶೀ ಬರುತ್ತದೆ. ಅವರಲ್ಲಿ ಯಾರಿಗೂ ಚರಿತ್ರೆ-ಭೂಗೋಳದ ಪರಿಚಯವಿಲ್ಲ. ಈಗ ನೀವು ತಿಳಿದುಕೊಂಡಿದ್ದೀರಿ. ಸತ್ಯಯುಗದ ನಂತರ ತ್ರೇತಾ ಆಗುತ್ತದೆ ಆಗ ಎರಡು ಕಲೆ ಕಡಿಮೆ ಆಗುವುದರಿಂದ ಸ್ವಲ್ಪ ಸುಖ ಕಡಿಮೆ ಆಗುತ್ತದೆಯೆಂದು ಅಲ್ಲಿ ಅವರು ತಿಳಿದಿರುತ್ತಾರೇನು? ಒಂದುವೇಳೆ ಈ ಜ್ಞಾನ ಸತ್ಯಯುಗದಲ್ಲಿ ಗೊತ್ತಿದ್ದರೆ ಅಲ್ಲಿಯೂ ಸಹ ದುಃಖಿಗಳಾಗಿ ಬಿಡುತ್ತಾರೆ. ನಾವು ಕೆಳಗೆ ಇಳಿಯುತ್ತಿದ್ದೇವೆಂದು ಮನಸ್ಸು ಮುದುಡುತ್ತದೆ. ರಾಜ್ಯ ಭಾಗ್ಯವೇ ಇಷ್ಟವಾಗುವುದಿಲ್ಲ. ಇಲ್ಲಿಯೂ ಸಹ ಕೆಲವರು ಈ ರೀತಿ ಹೇಳುತ್ತಾರೆ - ನಾವು ಸ್ವರ್ಗದ ಮಾಲಿಕರಾದ ಮೇಲೆ ಪುನಃ ಇಳಿಯಬೇಕಾಗುತ್ತದೆ. ಆದರೆ ಅಲ್ಲಿ ರಾಜ್ಯ ಭಾರ ಪಡೆದಂತಹ ಖುಷಿಯಿರುತ್ತದೆ. ಈಗ ನಮ್ಮನ್ನು ತಂದೆ ತ್ರಿಕಾಲದರ್ಶಿಯನ್ನಾಗಿ ಮಾಡುತ್ತಿದ್ದಾರೆ. ಲಕ್ಷ್ಮೀ-ನಾರಾಯಣರು ಸ್ವರ್ಗದ ಮಾಲಿಕರಾಗಿದ್ದರು, ಅವರೂ ಸಹ ತ್ರಿಕಾಲದರ್ಶಿಗಳಾಗಿರುವುದಿಲ್ಲ. ಸಂಗಮಯುಗದಲ್ಲಿ ತಂದೆ ಬಂದು ಮೂರನೆಯ ನೇತ್ರವನ್ನು ನೀಡಿ ತ್ರಿಕಾಲದರ್ಶಿಯನ್ನಾಗಿ ಮಾಡುತ್ತಾರೆ. ದೇವತೆಗಳಿಗೆ ಈ ಎಲ್ಲಾ ಅಲಂಕಾರಗಳನ್ನು ಏಕೆ ಕೊಡುತ್ತಾರೆ? ಏಕೆಂದರೆ ಅದು ಬ್ರಾಹ್ಮಣ ಜೀವನದ ಪರಿಪೂರ್ಣ ಸ್ಥಿತಿಯ ಸಂಕೇತವಾಗಿದೆ. ಬ್ರಾಹ್ಮಣರೂ ಸಹ ಏರು-ಪೇರು ಆಗುತ್ತಿರುತ್ತಾರೆ. ಅವರಿಗೆ ಈ ಅಲಂಕಾರಗಳನ್ನು ಕೊಟ್ಟರೆ ಶೋಭಿಸುವುದಿಲ್ಲ. ನಾಟಕದಲ್ಲಿ ಎಷ್ಟೊಂದು ಆಶ್ಚರ್ಯದ ರಹಸ್ಯವಿದೆ. ಬ್ರಾಹ್ಮಣರೇ ಸ್ವದರ್ಶನ ಚಕ್ರಧಾರಿಗಳಾಗಿದ್ದಾರೆ. ಈ ಜ್ಞಾನದಿಂದ ನೀವು ದೇವತೆ ಆಗುತ್ತೀರಿ. ಈ ಸಮಯದಲ್ಲಿ ನೀವು ಸ್ವದರ್ಶನ ಚಕ್ರಧಾರಿ, ತ್ರಿನೇತ್ರಿ, ತ್ರಿಕಾಲದರ್ಶಿ ಆಗಿದ್ದೀರಿ. ಇದು ನಿಮ್ಮ ಬಿರುದಾಗಿದೆ. ಈ ಎಲ್ಲಾ ಮಾತುಗಳು ತಿಳಿದು ಹಾಗು ತಿಳಿಸಿಕೊಡುವಂತಹ ಮಾತುಗಳಾಗಿವೆ. ಮೊಟ್ಟ ಮೊದಲಿಗೆ ತಂದೆಯ ಪರಿಚಯವನ್ನು ಕೊಡಬೇಕು. ಪರಮಪಿತ ಪರಮಾತ್ಮನೊದಿಗೆ ನಿಮ್ಮ ಸಂಬಂಧವೇನು. ಅವರ ಹೆಸರು ಪರಮಪಿತ ಪರಮತ್ಮ ಎಂದಾಗಿದೆ. ಈ ರೀತಿ ಪರಮಪಿತ ಪರಮಾತ್ಮ ಸರ್ವವ್ಯಾಪಿ ಎಂದು ಹೇಳಲಾಗುತ್ತದಯೇ? ಅವರು ತಂದೆಯಾಗಿದ್ದಾರಲ್ಲವೇ? ಪರಮಪಿತ ಪರಮಾತ್ಮನೊಂದಿಗೆ ನಿಮ್ಮ ಸಂಬಂಧವೇನು? ಎಂದು ಬರೆಯುತ್ತೇವೆ. "ಪರಮಪಿತನೆಂದು ಹೇಳುವಾಗ ಅವಶ್ಯವಾಗಿ ತಂದೆ ಆದರಲ್ಲವೇ. ತಂದೆ ಹೇಗೆ ಸರ್ವವ್ಯಾಪಿ ಆಗುತ್ತಾರೆ! ತಂದೆಯಿಂದ ಆಸ್ತಿ ಸಿಗುತ್ತದೆ. ತಂದೆ ಹೊಸ ಜಗತ್ತಿನ ರಚೈತನಾಗಿದ್ದಾರೆ. ಈ ಲಕ್ಷ್ಮೀ-ನಾರಾಯಣರಿಗೆ ಹೊಸ ಪ್ರಪಂಚದ ಆಸ್ತಿ ಪ್ರಾಪ್ತಿಯಾಗಿದೆ. ದೇವತೆಗಳಿಗೆ ಮೂರನೇಯ ನೇತ್ರದ ಅವಶ್ಯಕತೆಯಿರುವುದಿಲ್ಲ. ಮೂರನೇಯ ನೇತ್ರವನ್ನು ಬ್ರಹ್ಮಣ ಮುಖಾಂತರ ಕೊಡುತ್ತಾರೆ. ತ್ರಿಮೂರ್ತಿಯ ಅರ್ಥ ಬಹಳ ಚೆನ್ನಾಗಿದೆ. ತುಂಬಾ ನಶೆಯಿಂದ ತಿಳಿಸಿಕೊಡಬೇಕು. ಜ್ಞಾನದಲ್ಲಿ ಯಾರು ಚೆನ್ನಾಗಿ ನುರಿತಿರುತ್ತಾರೆ, ಅವರಿಗೆ ಅಭ್ಯಾಸವಿರುತ್ತದೆ. ದಿನ ಪ್ರತಿದಿನ ಅನ್ಯರಿಗೆ ತಿಳಿಸಿಕೊಡುವುದು ಸಹಜವಾಗುತ್ತಾ ಹೋಗುತ್ತದೆ. ಪರಮಪಿತ ಪರಮಾತ್ಮ ನಿಮಗೆ ಏನಾಗುತ್ತಾರೆ? ತಂದೆ ಆಗುತ್ತಾರೆ ಎಂದು ಹೇಳುವರು. ತಂದೆ ಹೊಸ ಪ್ರಪಂಚದ ರಚೈತನಾಗಿದ್ದಾರೆ. ಸತ್ಯಯುಗದಲ್ಲಿ ದೇವೀ-ದೇವತೆಗಳ ರಾಜ್ಯವಿತ್ತು. ಪರಮಪಿತ ಪರಮಾತ್ಮನಿಂದಲೇ ಅವರಿಗೆ ಆಸ್ತಿ ದೊರೆತಿರಬೇಕು. ರಾಜಯೋಗವನ್ನು ಕಲಿತು ರಾಜ್ಯಭಾಗ್ಯವನ್ನು ಪಡೆಯುತ್ತಾರೆ. ನಾವೆಲ್ಲರು ಬ್ರಹ್ಮಾಕುಮಾರ-ಕುಮಾರಿಯರಾಗಿದ್ದೇವೆ. ಯಾರಿಗಾದರು ತಿಳಿಸಿಕೊಡಿ. ಒಳ್ಳೆಯದು ನೀವು ಪ್ರಜಾಪಿತ ಬ್ರಹ್ಮನೆಂದು ಹೇಳುತ್ತೀರಲ್ಲವೆ. ಅವರು ನಿಮ್ಮ ತಂದೆಯಾದರಲ್ಲವೆ. ಅವರೂ ಸಹ (ಶಿವ) ತಂದೆಯಾಗಿದ್ದಾರೆ. ನೀವು ಸಹ ಬ್ರಹ್ಮಾಕುಮಾರ-ಕುಮಾರಿಯರಾಗಿದ್ದೀರಿ. ನಾವು ತಾತನಿಂದ ಆಸ್ತಿ ಪಡೆಯುತ್ತಿದ್ದೇವೆ. ನೀವು ತೆಗೆದುಕೊಳ್ಳುತ್ತಿಲ್ಲ. ನೀವು ಬಂದು ತಿಳಿದುಕೊಂಡು ಪುರುಷಾರ್ಥ ಮಾಡಿದಾಗ ಆಸ್ತಿ ಸಿಗುತ್ತದೆ. ಪ್ರಜಾಪಿತ ಬ್ರಹ್ಮಾ ಹಾಗು ಜಗದಂಬಾ ಸರಸ್ವತಿ ಇಬ್ಬರು ಮುಖ್ಯವಾಗಿದ್ದಾರೆ. ಲಕ್ಷ್ಮೀ ನಾರಾಯಣನಂತಹ ಪದವಿ ಸಿಗುತ್ತದೆ. ತಂದೆ ಮಕ್ಕಳಿಗೆ ವಿವಿದ ರೀತಿಯಲ್ಲಿ ತಿಳಿಸಿಕೊಡುತ್ತಾರೆ. ದೊಡ್ಡ-ದೊಡ್ಡ ಸಮ್ಮೇಳನಗಳಲ್ಲಿ ಹೋಗಿ ತಿಳಿಸಿಕೊಟ್ಟಾಗ ತಂದೆ ಹೆಸರು ಪ್ರಖ್ಯಾತ ವಾಗುತ್ತದೆ. ಇದು ಜ್ಞಾನದ ಮಾತಾಗಿದೆ. ಬೇರೆ ಎಲ್ಲವು ಭಕ್ತಿಯ ಮಾತುಗಳಾಗಿವೆ. ಜ್ಞಾನದ ಶಕ್ತಿಯಿಂದ ಯಾರನ್ನು ಬೇಕಾದರು ಕೇಳಬಹುದು. ಆದರೆ ತಿಳಿಯುವಂತಹವರು ಕೆಲವರು ತಕ್ಷಣ ತಿಳುದುಕೊಳ್ಳುವುದಿಲ್ಲ. ತುಂಬಾ ವಾದ ವಿವಾದ ಮಾಡುತ್ತಾರೆ. ತಿಳಿದುಕೊಂಡು ಬಿಟ್ಟರೆ ನಮ್ಮ ಗೌರವ ಹೋಗುತ್ತದೆಂದು ತಿಳಿಯುತ್ತಾರೆ. ಆದುದರಿಂದ ಕುಮಾರಿಯರು ಭೀಷ್ಮ ಪಿತಾಮಹನೊಂದಿಗೆ ವಿಜಯಿಯಾದರು ಎಂದು ಬರೆಯಲ್ಪಟ್ಟಿದೆ. ವಿಜಯ ಆಗಲೇ ಬೇಕಾಗಿದೆ. ಅವಶ್ಯಕವಾಗಿ ನಾಟಕದಲ್ಲಿ ವಿಜಯದ ಪಾತ್ರವಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ವಿಜಯಮಾಲೆಯಲ್ಲಿ ಬರುವ ಸಲುವಾಗಿ ಮಮ್ಮಾ ಬಾಬಾರವರ ಸಮಾನ ಸೇವೆ ಮಾಡಬೇಕು. ಮುರಳಿ ಧಾರಣೆ ಮಾಡಿ ನಂತರ ತಿಳಿಸಿಕೊಡಬೇಕು. ನಮ್ಮ ಚಲನೆಯನ್ನು ತುಂಬಾ ರಾಯಲ್ (ಘನತೆ) ಆಗಿ ಇಟ್ಟುಕೊಳ್ಳಬೇಕು.

2. ತಮ್ಮ ವಿಶಾಲ ಬುದ್ಧಿಯಿಂದ ಬೇಹದ್ದಿನ ನಾಟಕವನ್ನು ತಿಳಿದು ಅಪಾರ ಖುಷಿಯಲ್ಲಿರಬೇಕು. ಬಿರುಗಾಳಿಗೆ ಭಯ ಪಡಬಾರದು. ಜ್ಞಾನ ಮನನದಿಂದ ಬುದ್ಧಿಯನ್ನು ತುಂಬಿಸಿಕೊಂಡಿರಬೇಕು.

ವರದಾನ: ವಿಪರೀತ ಭಾವನೆಗಳನ್ನು ಸಮಾಪ್ತಿಗೊಳಿಸುತ್ತಾ ಅವ್ಯಕ್ತ ಸ್ಥಿತಿಯ ಅನುಭವ ಮಾಡುವಂತಹ ಸದ್ಭಾವನೆಯಿಂದ ಸಂಪನ್ನ ಭವ.

ಜೀವನದಲ್ಲಿ ಹಾರುವ ಕಲೆ ಅಥವಾ ಬೀಳುವ ಕಲೆಯ ಆಧಾರವು ಎರಡು ಮಾತುಗಳಲ್ಲಿವೆ - ಭಾವನೆ ಮತ್ತು ಭಾವ. ಸರ್ವರ ಬಗ್ಗೆ ಕಲ್ಯಾಣದ ಭಾವನೆ, ಸ್ನೇಹ-ಸಹಯೋಗ ಕೊಡುವ ಭಾವನೆ, ಸಾಹಸ-ಉಲ್ಲಾಸವನ್ನು ಹೆಚ್ಚಿಸುವ ಭಾವನೆ, ಆತ್ಮಿಕ ಸ್ವರೂಪದ ಭಾವನೆ ಅಥವಾ ನನ್ನವರೆಂಬ ಭಾವನೆಯೇ ಸದ್ಭಾವನೆಯಾಗಿದೆ. ಇಂತಹ ಭಾವನೆಯಿರುವವರೇ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಲು ಸಾಧ್ಯವಾಗುವುದು. ಒಂದುವೇಳೆ ಇದಕ್ಕೆ ವಿಪರೀತವಾದ ಭಾವನೆಯಿದ್ದರೆ ವ್ಯಕ್ತಭಾವವು ತನ್ನ ಕಡೆಗೆ ಆಕರ್ಷಿಸುತ್ತದೆ. ಯಾವುದೇ ವಿಘ್ನಗಳ ಮೂಲ ಕಾರಣವು ಇದೇ ವಿಪರೀತ ಭಾವನೆಗಳಾಗಿವೆ.

ಸ್ಲೋಗನ್: ಸರ್ವಶಕ್ತಿವಂತ ತಂದೆಯು ಯಾರ ಜೊತೆಯಿದ್ದಾರೆಯೋ ಅವರ ಮುಂದೆ ಮಾಯೆಯು ಕಾಗದದ ಹುಲಿಯಾಗಿದೆ.

ಲವಲೀನ ಸ್ಥಿತಿಯ ಅನುಭವ ಮಾಡಿರಿ:

ಯಾರೊಂದಿಗೆ ಪ್ರೀತಿಯಿರುತ್ತದೆ ಅವರಿಗೇನು ಇಷ್ಟವಾಗುವುದೋ ಅದನ್ನೇ ಮಾಡಲಾಗುವುದು. ಅಂದಮೇಲೆ ತಂದೆಗೆ ಮಕ್ಕಳು ಬೇಸರವಾಗುವುದು ಇಷ್ಟವಾಗುವುದಿಲ್ಲ. ಆದ್ದರಿಂದ ಎಂದಿಗೂ ಹೀಗೆ ಹೇಳಬಾರದು - ನಾನೇನು ಮಾಡಲಿ, ಮಾತೇ ಹೀಗಿತ್ತು. ಆದ್ದರಿಂದ ಬೇಸರವಾಗಿ ಬಿಟ್ಟೆನು..... ಒಂದುವೇಳೆ ಮಾತೇ ಬೇಸರವಾಗುವಂತಹ ಮಾತು ಬಂದರೂ ಸಹ ತಾವು ತಮ್ಮ ಸ್ಥಿತಿಯನ್ನು ಅಪ್ಸೆಟ್ ಮಾಡಿಕೊಳ್ಳಬಾರದು.